# ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಜಾತಿ-ಮತ-ಧರ್ಮ ಸಾಮರಸ್ಯದ ನೆಲೆಗಳು

**ಚಂದ್ರಶೇಖರ ಪಿ.***

**DOI: https://doi.org/10.5281/zenodo.19415727**

**ABSTRACT**

'ಸಾಮರಸ್ಯ' ಎಂಬ ಪದ ಅಥವಾ ಪರಿಕಲ್ಪನೆಗೆ ಅರ್ಥ ಕೋಶದಲ್ಲಿ ಹೊಂದಾಣಿಕೆ, ಸಹೋದರತೆ, ಸಮರಸ, ಹಿತ, ಸಾಂಗತ್ಯ, ಐಕ್ಯಮತ, ಸಹಬಾಳ್ವೆ, ಸಮಾನತೆ ಎಂಬ ಅರ್ಥಗಳನ್ನು ನೀಡಲಾಗಿದೆ. ಎಲ್ಲವನ್ನು ಎಲ್ಲರಿಗೂ ಹಂಚುವುದು ಅಥವಾ ಎಲ್ಲರನ್ನೂ ಸಮಾನವಾಗಿ ನೋಡುವುದು ಅಥವಾ ಎಲ್ಲ ಧರ್ಮಗಳನ್ನು ಸಮಾನ ಅಂತರದಲ್ಲಿಟ್ಟು ನೋಡುವುದು ಸಾಮರಸ್ಯ ಎನಿಸಿಕೊಳ್ಳುತ್ತದೆ. ಕೇವಲ ನೋಡಿದ ಮಾತ್ರಕ್ಕೆ ಸಾಮರಸ್ಯ ಸಾಧಿಸಲು ಸಾಧ್ಯವಾಗುವುದಿಲ್ಲ. ಸಹ ಹಿತಕ್ಕಾಗಿ ಒಂದಾಗಿ ಬದುಕಿದಾಗ ಮಾತ್ರ ಸಾಮರಸ್ಯ ಪ್ರಜ್ಞೆ ಹುಟ್ಟಲು ಸಾಧ್ಯ. 'ಸಾಮರಸ್ಯ' ಎಂಬ ಪದವು ವಿಶಾಲ ಅರ್ಥದ ಮನೋಭಾವದಲ್ಲಿ ಮನುಷ್ಯ ಪ್ರಜ್ಞೆಯ ಸ್ಥಿತಿಯಾಗಿದೆ. ಸುತ್ತಮುತ್ತಲಿನ ಎಲ್ಲದಕ್ಕೂ ಪ್ರೀತಿಯ ಭಾವನೆ, ಶುದ್ಧತೆಯ ಮನಸ್ಸು, ಆರೋಗ್ಯಕರ ಮಾತು, ಸಕಾರಾತ್ಮಕ ಭಾವನೆಗಳ ಜೊತೆಯಲ್ಲಿ ಸ್ಥಾಪಿತವಾದ ಪ್ರಜ್ಞೆಯಲ್ಲಿ ಸಾಮರಸ್ಯ ಎಂಬ ಪರಿಸರ ಪ್ರಜ್ಞೆಯು ನಿರ್ಮಾಣವಾಗುತ್ತದೆ. ಒಂದು ರೀತಿಯಲ್ಲಿ ಸಾಮರಸ್ಯ ಎಂಬ ಪರಿಸರ ಪ್ರಜ್ಞೆಯು ಮನುಷ್ಯ ಸಂಬಂಧದಿಂದ ಒಂದು ರೀತಿಯಲ್ಲಿ ಸಾಮರಸ್ಯ ಪ್ರಜ್ಞೆಯು ಮನುಷ್ಯ ಸಂಬಂಧದಿಂದ ಹುಟ್ಟಿದ ಬದುಕಿನ ಲಯವಾಗಿದೆ. ಲ್ಯಾಟಿನ್ ಭಾಷೆಯ 'ಹಾರ್ಮೋನಿ' ಎಂಬ ಶಬ್ದ ಯಥಾ ಸ್ಥಿತಿಯಲ್ಲಿ ಇಂಗ್ಲಿಷಿನಲ್ಲಿ ಬಳಕೆಯಾಗುತ್ತಿದ್ದು ಇದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಸಾಮರಸ್ಯ' ಪದ ಬಳಕೆಯಾಗುತ್ತಿದೆ.

**KEYWORDS:** ಮಧ್ಯಕಾಲೀನ ಕನ್ನಡ ಸಾಹಿತ್ಯ, ಜಾತಿ, ಮತ, ಧರ್ಮ, ಸಾಮರಸ್ಯ, ಸಮಾನತೆ.

* **ಡಾ. ಚಂದ್ರಶೇಖರ ಪಿ.**, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ನಗರ.

ಧರ್ಮ ಎಂದರೆ ವಸ್ತುನಿಷ್ಠ ಚಿಂತನೆಯ ಮಾರ್ಗವಾಗಿ, ದೇಶಿಚಿಂತನೆಯ ಮತ್ತು ಪ್ರತ್ಯೇಕತೆಯ ಚಿಂತನಾದ ಮಾರ್ಗವಾಗಿ ಸ್ವ-ಅಸ್ತಿತ್ವದ ಚಿಂತನ ಕ್ರಮವಾಗಿ ಅಥವಾ ಅಸ್ಮಿತೆಯ ಚಿಂತನದ ಮಾರ್ಗವಾಗಿ ಹೀಗೆ ಬಹುಮುಖ ಸ್ವರೂಪದಲ್ಲಿ ತನ್ನ 'ಇರುವಿಕೆ'ಯನ್ನು ಮನನ ಮಾಡುತ್ತ ಬಂದಿರುವುದು ಕಂಡುಬರುತ್ತದೆ. ಈ ಎಲ್ಲ ಇರುವಿಕೆಗಳ ಬಗ್ಗೆ ಏಕ ಕಾಲದಲ್ಲಿಯೇ ಧರ್ಮ ಪ್ರತ್ಯೇಕಗೊಳಿಸಿದೆ ಎಂಬರ್ಥವಲ್ಲ. ಬೇರೆ ಬೇರೆ ಚಿಂತನ ಕ್ರಮವನ್ನು ಅನುಸರಿಸಿರುವುದು ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣ ಒಂದು ಧರ್ಮ ತನ್ನ ಅಸ್ತಿತ್ವ – ಅಸ್ಮಿತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ನಡೆಸುವ ಹೋರಾಟವಾಗಿದೆ.

ಒಂದು ಧರ್ಮ ತನ್ನ ಚಿಂತನ ಪರಿಧಿಯಲ್ಲಿ ತಾನೂ ಬದುಕುವಾಗ, ಅನ್ಯಧರ್ಮದ ಬೆಳವಣಿಗೆಯ ಪ್ರಕ್ರಿಯೆ ಪ್ರತಿಸ್ಪರ್ಧಿಯಂತೆ ಗೋಚರವಾಗಿ, ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ನಡೆಸುವ ಸಂಘರ್ಷ ಒಂದೆಡೆಯಾದರೆ, ಸಮಾನ ಧೋರಣೆಯ ಅಥವಾ ಸಮಾನ ಚಿಂತನ ಕ್ರಮದ ಧರ್ಮ-ಮತಗಳು ಪರಸ್ಪರ ಹತ್ತಿರವಾಗುವ ಬಗ್ಗೆ ತಿಳಿಸುತ್ತದೆ. ಇಲ್ಲಿಯೇ ಒಂದು ಧರ್ಮದ ಅಥವಾ ಮತದ ತಾತ್ವಿಕತೆಗಳು ಮುಖಾಮುಖಿಯಾಗುತ್ತದೆ. ಹೀಗೆ ಮುಖಾಮುಖಿಯಾದಾಗ ತಾತ್ವಿಕತೆಯಲ್ಲಿ ಹೊರೆ ಕಳಚುವ, ಹೊಸ ರೂಪಧಾರಣ ಮಾಡುವ ಅಥವಾ ಇರುವುದನ್ನು ಪರಿಷ್ಕರಿಸುವ ಸ್ವರೂಪಗಳು ಎದುರಾಗುತ್ತದೆ.

ಧರ್ಮ ಎಂಬುವುದು 'ಒಂದು ವೈಚಾರಿಕ ಕ್ರಮ' ಎಂದಾದಾಗ ಧರ್ಮದಲ್ಲಾಗುವ ಬದಲಾವಣೆಗೆ ಕಾರಣವಾಗುತ್ತದೆ. ಇತರ ಎಲ್ಲ ಕ್ಷೇತ್ರಗಳ ಮೇಲೂ ಪರಿಣಾಮವನ್ನು ಬೀರಿ ಬದಲಾವಣೆಗೆ ಕಾರಣವಾಗುತ್ತದೆ. ಬದಲಾವಣೆ ಸಾಮಾಜಿಕ, ಸಾಂಸ್ಕೃತಿಕ ಎಲ್ಲಾ ಕ್ಷೇತ್ರಗಳ ಮೇಲೆ ಪರಿಣಾಮವನ್ನೂ ಬೀರುತ್ತವೆ. ಹಾಗೆಯೇ ಸಾಹಿತ್ಯ ಕ್ಷೇತ್ರದ ಒಳಜಗತ್ತಿನಲ್ಲಿಯೂ ಗಮನಾರ್ಹವಾದ ಬದಲಾವಣೆಗಳು ಸಾಧ್ಯವಾಗುತ್ತವೆ. ಧರ್ಮ ಹಾಗೂ ಇತರ ಕ್ಷೇತ್ರಗಳನ್ನು ತನ್ನ ತಹಬಂಧಿಯಲ್ಲಿಟ್ಟುಕೊಂಡಂತೆ, ಸಾಹಿತ್ಯವನ್ನೂ ಸೂತ್ರಧಾರನನ್ನಾಗಿ ಮಾಡಿಕೊಂಡಿರುವ ನಮ್ಮ ಗಮನಕ್ಕೆ ಬಾರದಿರದು. ಆದರೆ ಸಾಹಿತ್ಯ ಮತ್ತು ಧರ್ಮ ಒಂದೇ ನಾಣ್ಯದ ಎರಡು ಮುಖ ಎನ್ನುವಂತೆ ವ್ಯಕ್ತವಾದುವೇ ಅಧಿಕವಾಗಿದೆ. ಇವು ಒಂದಿನ್ನೊಂದರ ಬೆನ್ನೆಲುಬಾಗಿ ಪೂರಕವಾಗಿ ನಿಂತುಕೊಂಡು ಚಲಿಸಿದ್ದು ಈ ಕಾಲದಲ್ಲಿ ಅಧಿಕವಾಗಿದೆ.

ಸಜಾತಿ-ವಿಜಾತಿಗಳು ಅಥವಾ ಕುಲ, ವರ್ಣ, ಮತ, ಧರ್ಮ ಸಂಬಂಧಿತ ವಿಚಾರಗಳು ಸಂಕರವಾಗುವ ಅಥವಾ ಸಂಕರವಾಗದಂತೆ ನಿಷೇಧಿಸುವ, ನಿಷೇಧದ ನಂತರವೂ ಪ್ರಕ್ರಿಯೆಗೆ ಮುಂದಾದ ಜೀವಕೆ ನಿರಾಕರಿಸುವ ತುಚ್ಛೀಕರಿಸುವ ಇಂಥವುಗಳ ಒಂದು ದೊಡ್ಡ ಚರಿತ್ರೆಯೇ ಇಲ್ಲಿ ಹುದುಗಿದೆ. ಇವುಗಳ ನಡುವೆ ಜಾತಿ ಕುಲಗಳು ಪ್ರಧಾನ ಸ್ಥಾನವನ್ನೂ ವಹಿಸಿದೆ. ಇವು ಹುಟ್ಟಿದ ಮೂಲಕ್ಕೆ ಸಂಬಂಧಿಸಿದ ಎದುರಾದರೆ ವರ್ಣ-ಮತಗಳ ಅಂತರಂಗದ ಹಾಗೂ ವೈಚಾರಿಕ ಬದ್ಧತೆಯ

ಮುಖಗಳಾಗಿ ಕಾಣಿಸಿಕೊಳ್ಳುತ್ತವೆ. ಹುಟ್ಟಿನ ಮೂಲ ಜಾತಿ, ಕುಲ, ವ್ಯವಸ್ಥೆ ಮತ್ತು ಆಡಳಿತ ಮೂಲದ ವರ್ಣ-ಮತ ವ್ಯವಸ್ಥೆಗಳು ಪ್ರತಿಭೆ ಸಂಪತ್ತುಗಳಿಂದಾಗಿ ಮುಖಾಮುಖಿಯಾದಾಗ ಸಂಘರ್ಷ ಎದುರಾಗುವುದನ್ನು ಈ ಕಾವ್ಯಗಳು ದಾಖಲಿಸಿವೆ.

ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆಯನ್ನು ಸ್ಥೂಲವಾಗಿ ಕ್ರಿ.ಶ. 1100 ರಿಂದ ಕ್ರಿ.ಶ. 1400 ರವರೆಗೆ ಎಂದು ವಿದ್ವಾಂಸರು ವಿಂಗಡಿಸಿದ್ದಾರೆ. ಈ ಅವಧಿಯಲ್ಲಿ ವಚನ, ತ್ರಿಪದಿ, ರಗಳೆ, ಷಟ್ಪದಿ, ಸಾಂಗತ್ಯ ಮುಂತಾದ ಪ್ರಕಾರಗಳಲ್ಲಿ ಕಾವ್ಯ ಪ್ರಕಟಗೊಂಡಿದೆ. ಈ ಕಾಲದಲ್ಲಿ ಭಕ್ತಿ, ಅನುಭವ, ಆಧ್ಯಾತ್ಮ, ಕರ್ಮಸಿದ್ಧಾಂತದ ಮಂಡನೆಯು ಸಾಹಿತ್ಯದ ಆತ್ಮವಾಗಿ ತುಂಬಿಕೊಂಡಿದೆ. ಆದರೆ 1100 ರಿಂದ 1500 ರವರೆಗೆ ಬಂದ ಸಾಹಿತ್ಯದಲ್ಲಿ ಇನ್ನೊಂದು ಚರ್ಚೆಯಾಗದ ಹಾಗೆ ಜಾತಿ ವ್ಯವಸ್ಥೆಯನ್ನು ಕುರಿತು ಮಹತ್ವದ ಕ್ರಿಯೆ-ಪ್ರತಿಕ್ರಿಯೆ-ಸಂಘರ್ಷಗಳು ನಡೆದಿರುವುದನ್ನು ಸಾಹಿತ್ಯವು ಮನಗಾಣಿಸುತ್ತದೆ.

ಅಸ್ಪೃಶ್ಯತೆ ಈ ಕಾಲಮಾನದ ಜಾತಿ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿತ್ತು. ಮಧ್ಯಕಾಲದ ಭಕ್ತಿಪಂಥಗಳು ಜಾತಿಪದ್ಧತಿಯ ಅನಿಷ್ಟವನ್ನೂ ತೊಡೆದು ಹಾಕುವ ಪ್ರಯತ್ನವನ್ನು ತೀವ್ರವಾಗಿ ಮಾಡುತ್ತಿದ್ದವು. ಜೊತೆಗೆ ಸಾಮಾಜಿಕ ಅನಿಷ್ಟಗಳಾದ ಮೂಢನಂಬಿಕೆ, ಜಾತಿಪದ್ಧತಿ, ಅಸಮಾನತೆ ಮುಂತಾದ ಜೀವವಿರೋಧಿ ನಿಲುವುಗಳ ವಿರುದ್ಧ ಆಂದೋಲನಗಳನ್ನು ರೂಪಿಸಿತು. ಸ್ಥಾವರರೂಪಿ ಮತಧರ್ಮಗಳು ಅಸ್ಪೃಶ್ಯರಿಗೆ ಬದುಕಿನ ಸ್ವಾತಂತ್ರ್ಯದ ದಾರಿಯನ್ನು ತೋರಿಸಿದವು. ಭಕ್ತಿಯ ಆಚರಣೆ ಒಂದು ಹೊನಲಾಗಿ ಹರಿದು ಸಮಾಜೋ-ಧಾರ್ಮಿಕ ಆಂದೋಲನಕ್ಕೆ ತಳಹದಿಯಾಯಿತು. ಇದರ ಪರಿಣಾಮವಾಗಿ 12ನೇ ಶತಮಾನದಲ್ಲಿ ವೀರಶೈವ ಧರ್ಮದ ಅತ್ಯಂತ ಪ್ರಭಾವಿ ಧರ್ಮವಾಗಿ ತನ್ನ ಛಾಪನ್ನೊತ್ತಿತು.

ವಚನಗಳಲ್ಲಿ ತಮ್ಮ ಬದುಕಿನ ಧೋರಣೆಗಳನ್ನು ಪ್ರತಿಪಾದಿಸಿದ ವಚನಕಾರರು/ ವಚನಕಾರ್ತಿಯರು ಆಧ್ಯಾತ್ಮದೊಂದಿಗೆ ಸಾಮಾಜಿಕ ಬದ್ಧತೆಗೂ ಮಹತ್ವ ನೀಡಿದರು. ಭಕ್ತಿ ಮತ್ತು ಸಾಧನೆ ಧಾರ್ಮಿಕ ಸ್ಥಾನಮಾನದ ಅನುಶ್ರೇಣಿಗಿಂತ ಹೆಚ್ಚು ಉದಾರವೂ ವಿಶಾಲವೂ ಆದವು. ಲೌಕಿಕ ಮತ್ತು ಆಧ್ಯಾತ್ಮ ಇಹ ಮತ್ತು ಪರಗಳ ಸಮನ್ವಯ ಸೂತ್ರ ಚಾಲನೆಗೆ ಬಂದಿತು. ಆಧ್ಯಾತ್ಮಿಕ ಸಾಮಾಜಿಕರಣವೆಂಬ ಹೊಸ ವಿಧಾನ ವಚನಕಾರರಿಂದ ಸಾಧ್ಯವಾಯಿತು. ಈ ಆಂದೋಲನದಲ್ಲಿ ಕೇವಲ ಬಸವಣ್ಣ, ಅಲ್ಲಮ, ಚನ್ನಬಸವಣ್ಣ, ಅಕ್ಕಮಹಾದೇವಿ ಮುಂತಾದವರಷ್ಟೇ ಅಲ್ಲದೆ ಸಮಾಜದ ಎಲ್ಲ ವರ್ಗ, ಜಾತಿಗಳಿಂದ ಬಂದು ಸೇರಿದವರಾಗಿದ್ದರು. ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಹೊಲೆಯರ ಹೊನ್ನಯ್ಯ, ಕಾಳವ್ವೆ, ಗುಡ್ಡವ್ವೆ, ಸೂಳೆ ಸಂಕವ್ವೆ ಮುಂತಾದ ಸಮಾಜದ ಅತ್ಯಂತ ಕೆಳಗಿನ ಸ್ತರದಿಂದ ಮತ್ತು ಮೇಲಿನ ಸ್ತರದಿಂದ ಒಟ್ಟುಗೂಡಿ ಸಮಾನವಾಗಿ ಭಾಗವಹಿಸಿದವರ ಇವರೆಲ್ಲರೂ ತಮ್ಮ ಬದುಕಿನ ಭಾಷೆ, ವಸ್ತು, ಆಶಯ, ಪ್ರತೀಕ ರೂಪಕಗಳನ್ನು ಬಳಸಿ ವಚನ ರೂಪಕ್ಕೆ ವೈವಿಧ್ಯತೆಯನ್ನು

ತಂದುಕೊಟ್ಟರು.

ವಚನ ಚಳುವಳಿಯು ಅನುಭವ ಪ್ರಾಮಾಣ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದ್ದರಿಂದ ವರ್ಣಭೇದ, ವರ್ಗಭೇದ, ಜಾತಿ–ಲಿಂಗ ಭೇದದ ತರತಮಗಳನ್ನು ನಿರಾಕರಿಸಿತು. ಈ ಅರ್ಥದಲ್ಲಿ ವಚನಕಾರರು ಈ ನೆಲದ ಸಂತ ಕವಿಗಳು ವಿಶಾಲ ಅರ್ಥದಲ್ಲಿ ಸಮಾಜವಿಜ್ಞಾನಿಗಳು ಅನನ್ಯ ಸಾಂಸ್ಕೃತಿಕ ಚಿಂತಕರು ಕಲ್ಯಾಣ ಅರ್ಥಶಾಸ್ತ್ರಜ್ಞರು ಎಲ್ಲದಕ್ಕಿಂತ ಮುಖ್ಯವಾಗಿ ಮಹಾನ್ ಮಾನವತಾವಾದಿಗಳು ಜಗತ್ತಿನ ಸಾಮಾಜಿಕ ಚರಿತ್ರೆಯಲ್ಲಿ ಬುದ್ಧನ ತರುವಾಯ ಸಮಾನತೆಯ ಸಮಾಜಕ್ಕೆ ಹಂಬಲಿಸಿದವರು. ಇಡೀ ಜೀವ ಸಂಕುಲವನ್ನು ಸರ್ವ ಸಮಾನತೆಯ ನೆಲೆಯಲ್ಲಿ ಪೃಥಕ್ಕರಿಸಿದರು ಕೇವಲ ಕೆಳವರ್ಗದವರ ಬೆವರು ಮತ್ತು ಶ್ರಮದ ಆಧಾರದಿಂದ ಉಪಜೀವಿಗಳಾಗಿ ಬದುಕುತ್ತಿದ್ದ ಮೇಲ್ವರ್ಗದ ಸಮುದಾಯಗಳಿಗೆ ದುಡಿದುಣ್ಣುವ ನೀತಿ–ನಿಯಮಗಳನ್ನು ರೂಪಿಸಿದರು.

ಸಾಮಾಜಿಕ ವ್ಯವಸ್ಥೆಯಲ್ಲಿನ ಶ್ರೇಣೀಕರಣ ಜಾತಿ ವ್ಯವಸ್ಥೆಯನ್ನು ಗುರುತಿಸಿದ ದಲಿತ ವಚನಕಾರರು ಜಾತಿ, ಧರ್ಮ, ದೇವರು ಮುಂತಾದ ಉಪಾಧಿಗಳನ್ನು ಬಿಡಿಸಿಕೊಂಡು ಹೊಸ ಸಮುದಾಯವೊಂದರ ಕನಸು ಕಂಡರು. ಈ ದೃಷ್ಟಿಯಿಂದ ದಲಿತ ವಚನಕಾರರಿಗೆ ವಿಶಿಷ್ಟವಾದ ಗುರುತ್ವ ಲಭಿಸುತ್ತದೆ. ಇವರು ಎಷ್ಟೋ ಸಲ ವೀರಶೈವ ಧರ್ಮದ ಪ್ರಧಾನ ಆಶಯವಾದ ಭಕ್ತಿ, ಪ್ರಸಾದ, ಜಂಗಮ, ಶರಣ ಇತ್ಯಾದಿ ಧಾರ್ಮಿಕ ತತ್ವಗಳನ್ನು ಮೀರಿ ಬೆಳೆದಿದ್ದಾರೆ. ಬಸವಣ್ಣನಿಗೆ ಪ್ರತಿ ಬಸವಣ್ಣನಾಗಿ ಬೆಳೆದ ದಲಿತ ವಚನ ವಚನಕಾರರು ಜಾತಿ–ಜಾತಿಗಳ ಅಸಮಾನತೆಯನ್ನು ಮತ್ತು ಸಾಮಾಜಿಕ ಬದುಕಿನ ತಾರತಮ್ಯವನ್ನು ಹೋಗಲಾಡಿಸಲು ಜಾತಿಗಳಲ್ಲಿ ಯಾರು ಶ್ರೇಷ್ಠರಲ್ಲ ಎಂದು ಸಾರಿದ್ದಾರೆ. ಈ ಮೂಲಕ ಸಮಾಜಕ್ಕೆ ಅಂಟಿಕೊಂಡು ಬಂದಿದ್ದ ಪುರಾತನ ಅಂಧಕಾರವನ್ನು ತೊಗಲಿಸಿ ಜಗತ್ತಿಗೆ ಒಂದು ಹೊಸ ಲೋಕದ ಪ್ರಜ್ಞೆಯನ್ನು ಬೆಳಗಿಸಿದ್ದಾರೆ. ಈ ಕಾಲಘಟ್ಟವನ್ನು 'ಶರಣರ ಮನುಜ ಚಳುವಳಿ' ಎಂದು ಪ್ರೊ. ಅರವಿಂದ ಮಾಲಗತ್ತಿ ಅವರು ಕರೆಯುತ್ತಾರೆ.

ಮತ, ಧರ್ಮ ಸಂಬಂಧಿ ಉತ್ಪ್ರೇಕ್ಷಿತ ಗೌರವಗಳು ಮತ್ತು ನಂಬಿಕೆಗಳು ಕನ್ನಡ ಮಧ್ಯಕಾಲೀನ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರಭಾವಿಸಿವೆ. ಜಂಗಮತ್ವದ ಹಿನ್ನೆಲೆಯಲ್ಲಿ ಚಲನೆಗೊಂಡ ಈ ಚಳವಳಿ ಪ್ರಭುತ್ವ ಮತ್ತು ಅದರ ಸಂಬಂಧಿ ಆಯಾಮಗಳನ್ನು ಧಿಕ್ಕರಿಸಿ ಬೆಳೆಯಿತು. ಅನೇಕ ಅಜ್ಞಾತ ವಚನಕಾರರು ನಾಸ್ತಿಕವಾದವನ್ನು ಪ್ರತಿಪಾದಿಸಿದ್ದಾರೆ. ಅಲ್ಲಮ, ಧೂಳಯ್ಯ, ಮಾಚಯ್ಯ, ನುಲಿಯ ಚಂದಯ್ಯ, ಕಾಳವ್ವೆ ಸತ್ಯಕ್ಕ ಮುಂತಾದ ವಚನಕಾರರು ಭಕ್ತಿಯನ್ನು ನಿರಾಕರಿಸಿ ಬಸವನ ಧರ್ಮವನ್ನು ಉಲ್ಲಂಘನೆ ಮಾಡುತ್ತಾರೆ. ವಚನಕಾರರು ಲಿಂಗದೀಕ್ಷೆಯ ಆಚರಣೆಯನ್ನು ಕೈಗೊಂಡರು.

ಜಾತಿ–ಮತಗಳ ಅಸಮಾನತೆಯನ್ನು ಹೋಗಲಾಡಿಸಲು ಜಾತಿಗಳಲ್ಲಿ ಯಾರು ಶ್ರೇಷ್ಠರಲ್ಲ ಯಾರು ಕನಿಷ್ಠರಲ್ಲ ಎಂದು ಸಾರಿದರು. ಜಾತಿಯ ಶ್ರೇಷ್ಠತೆಯನ್ನು

ನಿರಾಕರಿಸುತ್ತ ಅದಕ್ಕೆ ಸಂಬಂಧಿಸಿದ ಶಾಸ್ತ್ರ-ಪುರಾಣಗಳನ್ನು ಅಪಮೌಲ್ಯೀಕರಣಗೊಳಿಸಿದರು. ಆ ಮೂಲಕ ಕೆಳಜಾತಿಗಳಲ್ಲಿ ಆತ್ಮವಿಶ್ವಾಸವನ್ನು ವಚನಕಾರರ ಆಂದೋಲನ ಕಟ್ಟಿಕೊಟ್ಟಿತು. ಭಕ್ತನಾದ ಹೊಲೆಯ ಬಾಗಿದೇವನನ್ನು ಹಿರಿಯ ಕುಲ ಹಿರಿಯ ಮಹೇಶ್ವರ ಕುಲ ಎಂಬ ಹೆಸರಿನಿಂದ ಕರೆದು ಅವನ ವ್ಯಕ್ತಿತ್ವಕ್ಕೊಂದು ಘನತೆಯನ್ನು ತಂದು ಕೊಡುತ್ತಾನೆ. ಮಾದರ ಚೆನ್ನಯ್ಯನ ರಗಳೆಯಲ್ಲೂ ಕುಲಹೀನತೆಯನ್ನು ಕಳೆದುಹಾಕಲು ಸಾಕ್ಷಾತ್ ಪರಶಿವನೆ ಚನ್ನಯ್ಯನೊಂದಿಗೆ ಅಂಬಲಿ ಉಂಡ ಎಂಬ ಕತೆ ಪ್ರಮುಖವಾಗುತ್ತದೆ.

ದಲಿತ ಪ್ರಜ್ಞೆ ಮತ್ತು ಅಸ್ಪೃಶ್ಯತೆಯ ದೃಷ್ಟಿಯಿಂದ ರಾಘವಾಂಕನ ಹರಿಶ್ಚಂದ್ರ ಕಾವ್ಯ ಮುಖ್ಯವೆನಿಸುತ್ತದೆ. ಹೊಲತಿಯರ ಪ್ರಸಂಗವು ಅಸ್ಪೃಶ್ಯರ ಜಾತಿ ಸೂತಕವಾದ ಸಮಸ್ಯೆಯನ್ನು ಇನ್ನೊಂದು ಮಗ್ಗುಲಿನಿಂದ ನೋಡಲು ಸಹಾಯಕವಾಗಿದೆ. ಈ ಗಾನರಾಣಿಯರು ಒಬ್ಬ ರಾಜನನ್ನು ಹಿಡಿದು ನಿಲ್ಲಿಸಿ, ಕಣ್ಣು, ಕಿವಿ, ಮೂಗುಗಳಿಗೆ ಹೊಲೆಯಿಲ್ಲ ಚರ್ಮಕ್ಕೆ ಮಾತ್ರ ಹೊಲತನ ಹೇಗಾಯ್ತು ಎಂದು ಕೇಳುವುದು ಆ ಕಾಲಕ್ಕೆ ಸಾಮಾನ್ಯವಾದುದಲ್ಲ ಈ ಪ್ರಸಂಗವು ಭಾರತೀಯ ಸಮಾಜಕ್ಕೆ ಚರಿತ್ರೆಯಲ್ಲಿ ಒಂದು ಐತಿಹಾಸಿಕ ದಾಖಲೆಯಾಗಿದೆ. ಕವಿ ರಾಘವಾಂಕ ಜಾತಿಯ ಬಗೆಗೆ ಇದ್ದ ಸಾಂಪ್ರದಾಯಿಕ ಮನೋಧರ್ಮವನ್ನು ತಿರಸ್ಕರಿಸಿ ಪಲ್ಲಟವಾಗುತ್ತಿರುವ ಮೌಲ್ಯ ಪ್ರಜ್ಞೆಯೊಂದನ್ನು ಸೂಚಿಸುತ್ತಾನೆ. ನಾಡಿಗೆ ಚಕ್ರವರ್ತಿಯಾದವನನ್ನೇ ಅಸ್ಪೃಶ್ಯ ಮಹಿಳೆಯರು ನಮ್ಮನ್ನು ಮದುವೆಯಾಗು ಎಂದು ಕೇಳುವ ಕ್ರಾಂತಿಕಾರಕ ನಿಲುವು ಸಾಮಾನ್ಯವಾದುದಲ್ಲ. 'ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದಧಿಕವೇ' ಎಂಬ ಮಾತು ಆಧುನಿಕ ಸ್ತ್ರೀವಾದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾದುದಾಗಿದೆ. ಹಾಗೆಯೇ ವೀರಬಾಹುಕನನ್ನು ಹರಿಶ್ಚಂದ್ರನಿಗೆ ಆಳಾಗಿಸುವ ಸಂದರ್ಭದಲ್ಲಿ 'ಕೀಳಾರು, ಮೇಲಾರು ಹದುಳಿಪ್ಪ ನಾನು ಚಾಂಡಾಳನೋ ಹುಸಿಯ ಹೊಲೆಯಂ ಹೊರುವ ನೀನು ಚಾಂಡಾಳನೋ' ಎಂಬ ಮಾತಿನಲ್ಲಿ ಹರಿಶ್ಚಂದ್ರನ ಜಾತಿಯ ಅಹಂಕಾರವನ್ನು ಮೆಟ್ಟಿ ಅವನನ್ನು ರಾಘವಾಂಕ ಕುಗ್ಗಿಸುತ್ತಾನೆ.

ಹೀಗೆ ರಾಘವಾಂಕನು ಹರಿಹರ-ವಚನಕಾರರಿಗಿಂತಲೂ ವಾಸ್ತವಾದಿ ನೆಲೆಯಿಂದ ಜಾತಿಸಂಘರ್ಷದ ತಿಕ್ಕಾಟಗಳನ್ನು ಪೃಥಕ್ಕರಿಸುತ್ತಾನೆ. ಹರಿಹರ ರಾಘವಾಂಕರ ತರುವಾಯ ಕನ್ನಡ ನಾಡಿನ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸರ ಮತ್ತೊಂದು ತಿರುವಿಗೆ ಹೊರಳುತ್ತದೆ. ವೈದಿಕ ಧರ್ಮಸಂಬಂಧಿ ತಾತ್ವಿಕತೆಗಳು ಕೀರ್ತನೆ ಮೂಲಕ ಪ್ರಚಾರ ಪಡೆದವು.

ಕೀರ್ತನ ಸಾಹಿತ್ಯದಲ್ಲಿ ಪುರಂದರದಾಸ ಮತ್ತು ಕನಕದಾಸರನು ಹೊರತು ಪಡಿಸಿದರೆ ಮಿಕ್ಕ ದಾಸರೆಲ್ಲ ದಲಿತ ಶರಣ ಚಳುವಳಿಯ ಆಶಯಕ್ಕೆ ಪೂರಕವಾದ ಕೀರ್ತನೆಯನ್ನು ರಚಿಸಿರುವುದನ್ನು ಕಾಣುವುದಿಲ್ಲ. ಆಧ್ಯಾತ್ಮ-ಅಲೌಕಿಕತೆ, ಇಹ-ಪರಗಳು ಸಮನ್ವಯತೆಗಳನ್ನು ಸಾಧಿಸಲು ಹರಸಾಹಸ ಮಾಡಿದ್ದೇ ದಾಸ ಪಂಥದ ಪ್ರಮುಖ ಸಾಧನೆಯಾಗಿದೆ. ಪರಬ್ರಹ್ಮ ಮತ್ತು ಪರತತ್ವಕ್ಕಾಗಿ ಹಂಬಲಿಸಿದ ದಾಸರು

ಸಾಮಾಜಿಕ ಅಸಮಾನತೆಯ ಬಗೆಗಾಗಲಿ, ಜಾತಿ ಪದ್ಧತಿಯ ಬಗೆಗಾಗಲಿ ಇಲ್ಲವೇ ಸ್ತ್ರೀ ಸ್ಥಾನಮಾನದ ಬಗೆಗಾಗಲಿ ಹೆಚ್ಚು ಗಮನ ಹರಿಸಲಿಲ್ಲ. ಆಧ್ಯಾತ್ಮದ ಸಂಪತ್ತು ಬದುಕಿನ ಸ್ಥಿರ ಸುಖವೆಂದು ಬಗೆದ ದಾಸರಿಗೆ ಕರ್ಮಸಿದ್ಧಾಂತಗಳೇ ಕೈದೀವಿಗೆಯಾದವು. ಅದ್ವೈತ ತತ್ತ್ವದ ತೀವ್ರ ಖಂಡನೆ ಮತ್ತು ದ್ವೈತ ತತ್ವದ ಪ್ರತಿಪಾದನೆ ಈ ಪಂಥದ ಪ್ರಮುಖ ನಿಲುವಾಗಿತ್ತು.

ಚಾತುರ್ವರ್ಣ ವ್ಯವಸ್ಥೆ ಸಮಾಜದಲ್ಲಿ ಅಸ್ತಿತ್ವಕ್ಕೆ ಬಂದ ದೈವಿಕ ಸಮುದಾಯ ಹೆಚ್ಚು ಬಲಿಷ್ಠಗೊಂಡಿತು. ಧಾರ್ಮಿಕ ವಿಧಿ ವಿಧಾನಗಳಲ್ಲಿನ ಅನುಶ್ರೇಣಿಗಳು ಬದಲಾದವು ಅನ್ಯಮತ ಖಂಡನೆ ಮತ್ತು ಸ್ವಮತ ಪ್ರತಿಷ್ಠಾಪನೆ ಭಾಗವತ ಪರಂಪರೆಯ ಮೂಲಸೂತ್ರವಾಯಿತು. ದುಡಿಮೆಗೆ ದಲಿತರು ಫಲಕ್ಕೆ ಬಲಿತವರು ಹಕ್ಕುದಾರರಾದರು. ವಚನಕಾರರ ಕಾಲಕ್ಕೆ ತಿಳಿಯಾಗಿದ್ದ ಜಾತಿ ವ್ಯವಸ್ಥೆ ದಾಸರ ಕಾಲಕ್ಕೆ ಹೆಚ್ಚು ಘನೀಭೂತವಾಯಿತು.

ಹರಿ ಸರ್ವೋತ್ತಮನಾದುದರಿಂದ ಶಿವ ಮತ್ತು ಇತರ ದೈವಗಳ ಅಧೀನಗೊಂಡವು. ಇಂತಹ ಸಂದರ್ಭದಲ್ಲಿ ಪುರಂದರದಾಸ ಮತ್ತು ಕನಕದಾಸರು ಭಾಗವತ ಪರಂಪರೆಯ ಭಿನ್ನ ಧ್ವನಿಯಾಗಿ ಕಾಣಿಸುತ್ತಾರೆ. ಕುಲಕುಲವೆಂದು ಬಡಿದಾಡುತ್ತಿದ್ದ ಸಾಮಾನ್ಯರಿಗೆ ಪುರಂದರದಾಸರು ಕುಲದ ಬಗೆಗಿನ ವ್ಯಾಖ್ಯಾನವನ್ನು ಗುಣದೊಂದಿಗೆ ಸಂಯೋಜಿಸುತ್ತಾರೆ. ಈ ಸಂದರ್ಭದಲ್ಲಿ ಹೊಲೆಯರ ಬಗೆಗೂ ಮಾತನಾಡುತ್ತಾರೆ. 'ಹೊಲೆಯ ಹೊರಗಿಹನೆ ಊರೊಳಗಿಲ್ಲವೆ ಬಲ್ಲವರು ಪೇಳಿ' 'ಹರಿಭಕ್ತಿಯ ವ್ಯಾಮೋಹಕ್ಕೆ ದಾಸ ಕೂಟದ ಪ್ರಭಾವಕ್ಕೆ ಒಳಗಾಗಿ ದಾಸಪಂಥದಲ್ಲಿಯೇ ಕ್ರಾಂತಿಕಾರಿದಾಸರೆಂದು ಪರಿಗಣಿಸಿರುವ ಕನಕದಾಸರ ಜಾತಿ ವ್ಯವಸ್ಥೆಯ ಬಗೆಗೆ ತಾತ್ವಿಕವಾಗಿ ಪ್ರತಿಭಟಿಸುವ' ಎಂದು ಪುರಂದರದಾಸರು ಜಾತಿ ವ್ಯವಸ್ಥೆಯನ್ನು ಖಂಡಿಸುತ್ತಾರೆ. 'ಕುಲಕುಲವೆಂದು ಹೊಡೆದಾಡದಿರಿ ಕುಲ ಯಾವುದು ಸತ್ಯ ಸುಖವುಳ್ಳ ಜನರಿಗೆ ಎಂದು ಹೇಳುತ್ತಲೇ' 'ತಲ್ಲಣಿಸದಿರು ಕಂಡ್ಯಾ ತಾಳು ಮನವೆ ಎಲ್ಲರನು ಸಲಹುವವನು ಇದಕ್ಕೆ ಸಂಶಯವಿಲ್ಲ' ಎಂದು ಜಾತಿ ವ್ಯವಸ್ಥೆಯ ಬಗೆಗೆ ತಾತ್ವಿಕವಾಗಿ ಪ್ರತಿಭಟಿಸುತ್ತಾರೆ.

ಕನ್ನಡ ಸಂದರ್ಭಕ್ಕೆ ವಚನ ಮತ್ತು ಭಾಗವತ ಚಳುವಳಿಯ ನಂತರದಲ್ಲಿ ನಾವು ಪರಿಗಣಿಸಬಹುದಾದ ಮತ್ತೊಂದು ಇದೆ. ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕ ಈ ಭಾಗದಲ್ಲಿ 16ನೇ ಶತಮಾನದ ಶೀಘ್ರ ಸಾಹಿತ್ಯದ ಪ್ರಖರತೆಗಿಂತ ಹೆಚ್ಚು ಪ್ರಜ್ವಲಿಸಿದ್ದು ಜನಮನದ ಸಾಹಿತ್ಯ ಅದು ಜನಪದ ಸಾಹಿತ್ಯ. ಇದು 12ನೇ ಶತಮಾನದ ಶರಣರ ಕ್ರಾಂತಿಯ 2ನೇ ಕಂತಿನ ಕ್ರಾಂತಿ ಘಟ್ಟ ಎನ್ನಬಹುದು. ಅನುಭಾವ ಸಾಹಿತ್ಯ ಅಧಿಕೃತವಾಗಿ ಸಮಾಜಮುಖಿಯಾದುದು. ಮಾನವನ ಬದುಕು ಶಾಶ್ವತವಲ್ಲ ಹುಟ್ಟು ಸಾವಿನ ನಡುವೆ ಒಳ್ಳೆಯ ಕಾರ್ಯ ಮಾಡಬೇಕು ಎಂದು ಘೋಷಿಸಿದವರು. ಅಂಥವರಲ್ಲಿ ಮಂಟೇಸ್ವಾಮಿ, ಮಲೆಯ ಮಾದೇಶ್ವರ, ಜುಂಜಪ್ಪ, ಮರಳಸಿದ್ಧಪ್ಪ, ಬಿಳಿಗಿರಿರಂಗ, ಸಿದ್ಧಪ್ಪಾಜಿ, ರಾಚಪ್ಪಾಜಿ ಮುಂತಾದವರನ್ನು ಹೆಸರಿಸಬಹುದು.

ಇವರೆಲ್ಲ ಜಾತಿ, ಮತ ಮೀರಿ ಬದುಕಿದವರು ಮತ್ತು ಹಾಗೆ ಮೀರಿದವರಿಗೆ ತಕ್ಕ ಪಾಠ ಕಲಿಸುವವರಾಗಿ ಕಾಣುತ್ತಾರೆ.

ಹಾಗಾಗಿ ಮಧ್ಯಕಾಲೀನ ಕನ್ನಡ ಸಾಹಿತ್ಯವೆಂದರೆ ಅದು ಕೇವಲ ವಚನ, ಕೀರ್ತನೆ, ರಗಳೆ, ಸಾಂಗತ್ಯವಲ್ಲದೆ ಮಂಟೇಸ್ವಾಮಿ ಮತ್ತು ಮಲೆ ಮಹಾದೇಶ್ವರ, ಮಾರಿಕಾಂಬೆ, ಎಲ್ಲಮ್ಮನ ಕಾವ್ಯಗಳನ್ನು ಒಳಗೊಳ್ಳಬೇಕಾಗುತ್ತದೆ. ಇದಲ್ಲದೆ ಕಾಲು ದಾರಿಯ ಸಂತ ಪರಂಪರೆಯನ್ನು ಇದರ ಜೊತೆಗೆ ಪರಿಗಣಿಸಬೇಕಾಗುತ್ತದೆ. ಆ ಮೂಲಕ ಸಮಗ್ರ ಸಾಹಿತ್ಯ – ಸಂಸ್ಕೃತಿಯನ್ನು ವಿವರಿಸಿಕೊಳ್ಳುವ ವಿಧಾನಗಳು ಕೂಡ ಬದಲಾಗಬೇಕಾಗಿವೆ.

ಪ್ರಭುತ್ವ ಮತ್ತು ಧರ್ಮ ಒಟ್ಟು ಸೇರಿ ಛಿದ್ರಗೊಳಿಸುವ ನೆಲದಲ್ಲಿ ಸಾಮಾಜಿಕ ಸ್ವಾಸ್ಥ್ಯವನ್ನು ಜೀವನ ಧರ್ಮವೆಂದು ಸಾರಿದ ಕವಿ ಸರ್ವಜ್ಞ. ಸಮಾಜದ ಪ್ರತಿಯೊಂದು ಹಂತದಲ್ಲೂ ಅದರ ಅಂತರ್ಗತ ವೈರುಧ್ಯಗಳನ್ನು ಕಂಡು, ಹೇಸಿ ಅವುಗಳಿಂದ ದೂರವಿದ್ದು ಮೊನಚು ವ್ಯಂಗ್ಯದಿಂದ ತನ್ನ ಎದುರಿನ ಲೋಕ ವಾಸ್ತವವನ್ನು ವಿವರಿಸಿಕೊಂಡ ಸಂತ ಕವಿ. ಸಾಮಾಜಿಕ ಸಾಕ್ಷಿ ಪ್ರಜ್ಞೆಯಲ್ಲಿ ತನ್ನ ಬಂಡಾಯ ಮನೋಧರ್ಮಕ್ಕೆ ಸಹಜವಾಗಿ ಅನ್ಯಾಯ ಅನೀತಿಗಳ ವಿರುದ್ಧ ಸಿಡಿದೆದ್ದ ಒಬ್ಬ ಸಾಮಾಜಿಕ ಚಿಕಿತ್ಸಕಾರ. ತನ್ನ ತ್ರಿಪದಿಗಳ ಮೂಲಕ ಸಮಕಾಲೀನ ಸಾಮಾಜಿಕ ಮುಖವಾಡಗಳನ್ನೆಲ್ಲ ಬಯಲುಗೊಳಿಸಿದವನು ಅನಾಚಾರ, ಅಧರ್ಮ, ಬಾಹ್ಯಾಡಂಬರ, ಬೂಟಾಟಿಕೆ, ಪಕ್ಷಪಾತ, ಕುಟಿಲತೆ ಮುಂತಾದ ಜೀವ ವಿರೋಧಿ ಅನಿಷ್ಟ ನೆಲೆಗಳನ್ನು ನಿರ್ಭೀತ ಮತ್ತು ನಿಷ್ಪಕ್ಷವಾಗಿ ಪ್ರತಿಭಟಿಸಿದನು. 'ಜಾತಿಹೀನನ ಮನೆಯ ಜ್ಯೋತಿ ತಾ ಹೀನವೆ' ಎಂಬ ಮಾರ್ಮಿಕ ಪ್ರಶ್ನೆಯನ್ನು ಸಮಾಜಕ್ಕೆ ಕೇಳುತ್ತಲೇ ಜಾತಿ–ಮತದ ಕೊಳಕುಗಳನ್ನು ನಿವಾರಿಸಿಕೊಂಡನು.

**ಸಮಾರೋಪ:**

ಈ ರೀತಿಯಾಗಿ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಜಾತಿ – ಮತ – ಧರ್ಮಗಳ ನಡುವೆ ಸಾಮರಸ್ಯವನ್ನು ಬಿತ್ತುವ ಕೆಲಸವನ್ನು ಅಂದಿನ ಕವಿಗಳು, ತಮ್ಮ ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿದ್ದಾರೆ. ಹೀಗೆ ಕ್ರಿ.ಶ. 11ನೇ ಶತಮಾನದಿಂದ ಕ್ರಿ.ಶ. 15ನೇ ಶತಮಾನದವರೆಗೂ ರಚಿತವಾಗಿರುವ ಕನ್ನಡ ಸಾಹಿತ್ಯದಲ್ಲಿ ಜೀವ ಸಂಕುಲವನ್ನು ಸರ್ವ ಸಮಾನವಾಗಿ ಕಾಣಬೇಕೆಂಬ ಆಶಯದೊಂದಿಗೆ ಜಾತಿ–ಕುಲ, ಮತ–ಧರ್ಮ, ಲಿಂಗಭೇದ, ಅಸಮಾನ ನೆಲೆಗಳನ್ನು ಖಂಡಿಸಿ ಸಾಮರಸ್ಯದ ಕನಸು ಕಂಡ ಕವಿಗಳ ಮನೋಧೋರಣೆಯನ್ನು ಇಲ್ಲಿ ಮನಗಾಣಬಹುದು.

## ಪರಾಮರ್ಶನ ಗ್ರಂಥಗಳು:


1. ಮುಗಳಿ ರಂ. ಶ್ರೀ., (1953), ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು: ಉಷಾ ಸಾಹಿತ್ಯ ಮಾಲೆ.
2. ಅರವಿಂದ ಮಾಲಗತ್ತಿ (ಸಂ.), (2014), ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
3. ಶಿವರುದ್ರಪ್ಪ ಜಿ. ಎಸ್. (ಸಂ.), (1975), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂಪುಟ 2), ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
4. ಶಿವರುದ್ರಪ್ಪ ಜಿ. ಎಸ್., (1999), ಕನ್ನಡ ಸಾಹಿತ್ಯ ಸಮೀಕ್ಷೆ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.